# FAQ's

## ನಗರ ಯೋಜನಾ ವಿಭಾಗ

## ಕಟ್ಟಡ ನಕ್ಷೆ ಮಂಜೂರಾತಿ ಕುರಿತಂತೆ

1. **ಕಟ್ಟಡ ನಕ್ಷೆ ಮಂಜೂರಾತಿ ಬಗ್ಗೆ ಯಾರಿಗೆ ಅರ್ಜಿ ಸಲ್ಲಿಸಬೇಕು?**
   ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುವ ಸ್ವತ್ತುಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲು ವಿವಿಧ ಹಂತಗಳಲ್ಲಿ ಜವಬ್ದಾರಿ ನೀಡಲಾಗಿದೆ.

| ಕ್ರಮ ಸಂಖ್ಯೆ | ಸಕ್ಷಮ ಅಧಿಕಾರಿ | ಅನುಮತಿಸಬಹುದಾದ ಕಟ್ಟಡದ ಮಿತಿ | ಕಾರ್ಯವ್ಯಾಪ್ತಿ |
|---|---|---|---|
| 1 | 2 | 3 | 4 |
| 1 | ಸಹಾಯಕ ಕಾರ್ಯಪಾಲಕ ಅಭಿಯಂತರರು | ಸ್ವತ್ತಿನ ವಿಸ್ತೀರ್ಣ 2400 ಚ.ಅಡಿ ಮೀರದ ಸ್ವತ್ತುಗಳಲ್ಲಿ ನಿರ್ಮಿಸಲು ಪ್ರಸ್ತಾಪಿಸಿರುವ ಏಕಗೃಹ ವಸತಿ ಕಟ್ಟಡಗಳು | ಸಂಬಂಧಿಸಿದ ಉಪ ವಿಭಾಗ |
| 2 | ಸಹಾಯಕ ನಿರ್ದೇಶಕರು (ನಗರ ಯೋಜನೆ) | ಒಂದು ತಳ ಮಹಡಿ + ನೆಲ + ಮೇಲಿನ 3 ಅಂತಸ್ತುಗಳಿರುವ 15.00 ಮೀ. ಎತ್ತರ ಮೀರದ ಕಟ್ಟಡಗಳು | ಸಂಬಂಧಿಸಿದ ವಲಯ ಕಛೇರಿ |
| 3 | ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) | ತಳ ಮಹಡಿಗಳು + ನೆಲ + ಮೇಲಿನ 4 ಅಂತಸ್ತುಗಳು ಹಾಗೂ ಅದಕ್ಕೂ ಹೆಚ್ಚಿನ ಅಂತಸ್ತುಗಳುಳ್ಳ ಬಹುಮಹಡಿ ಕಟ್ಟಡಗಳ ನಕ್ಷೆ ಮಂಜೂರಾತಿ | ಮಹದೇವಪುರ ವಲಯ, ಪೂರ್ವ ವಲಯ, ಯಲಹಂಕ ವಲಯ ಮತ್ತು ದಾಸರಹಳ್ಳಿ ವಲಯ |
| 4 | ಜಂಟಿ ನಿರ್ದೇಶಕರು (ನಗರ ಯೋಜನೆ – ದಕ್ಷಿಣ) | ತಳ ಮಹಡಿಗಳು + ನೆಲ + ಮೇಲಿನ 4 ಅಂತಸ್ತುಗಳು ಹಾಗೂ ಅದಕ್ಕೂ ಹೆಚ್ಚಿನ ಅಂತಸ್ತುಗಳುಳ್ಳ ಬಹುಮಹಡಿ ಕಟ್ಟಡಗಳ ನಕ್ಷೆ ಮಂಜೂರಾತಿ | ಬೊಮ್ಮನಹಳ್ಳಿ ವಲಯ, ರಾಜರಾಜೇಶ್ವರಿನಗರ ವಲಯ, ದಕ್ಷಿಣ ವಲಯ ಮತ್ತು ಪಶ್ಚಿಮ ವಲಯ |

2. **ಕಟ್ಟಡ ನಕ್ಷೆ ಮಂಜೂರಾತಿಗೆ ಸಲ್ಲಿಸಬೇಕಾದ ದಾಖಲಾತಿಗಳು ಯಾವುವು?**
   ಕಟ್ಟಡ ನಕ್ಷೆ ಮಂಜೂರಾತಿಗಾಗಿ ಆನ್‌ಲೈನ್ ಕ್ರಮದಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ದಾಖಲಾತಿಗಳ ಈ ಕೆಳಕಂಡ ಪ್ರತಿಗಳನ್ನು ಸಂಬಂಧಿಸಿದ ಸ್ವತ್ತಿನ ಕಾರ್ಯ ವ್ಯಾಪ್ತಿ ಇರುವ ಕಛೇರಿಗೆ ಸಲ್ಲಿಸಬೇಕು

   i) ಕಟ್ಟಡ ಉಪವಿಧಿಗಳು – 2003 ರ ಷೆಡ್ಯೂಲ್ – II ರಲ್ಲಿ ನಿಗಧಿಪಡಿಸಿದ ನಮೂನೆಯಲ್ಲಿ ಅರ್ಜಿ

   ii) NBO ಷೆಡ್ಯೂಲ್ – II ರಲ್ಲಿ ದ್ವಿಪ್ರತಿಗಳಲ್ಲಿ ಕಟ್ಟಡದ ವಿವರಗಳು

   iii) ಸೂಪರ್‌ವಿಜನ್ ಸರ್ಟಿಫಿಕೇಟ್ – ಕಟ್ಟಡ ಉಪವಿಧಿಗಳು – 2003 ರ ಷೆಡ್ಯೂಲ್ – III ರಲ್ಲಿ ನಿಗಧಿಪಡಿಸಿದ ನಮೂನೆಯಲ್ಲಿ

   iv) ಅಫಿಡೆವಿಟ್ – ಪರಿಷ್ಕೃತ ಮಹಾಯೋಜನೆ – 2015 ರ ವಲಯ ನಿಯಮಾವಳಿಗಳ ಅಫೆಂಡಿಕ್ಸ್ – II ರಲ್ಲಿ ನಿಗಧಿಪಡಿಸಿದ ನಮೂನೆ.

ಇಂಡೆಮ್ನಿಟಿ ಬಾಂಡ್ – ರೂ. 100 ರ ಛಾಪಾ ಕಾಗದದ ಮೇಲೆ – ನಿಗಧಿಪಡಿಸಿದ ನಮೂನೆಯಲ್ಲಿ

v) ಮಾಲೀಕತ್ವದ ದಾಖಲಾತಿಗಳು

vi) ಖಾತಾ ಉದೃತ ಭಾಗ, ಖಾತಾ ಪ್ರಮಾಣಪತ್ರ ಮತ್ತು ಚಾಲ್ತಿ ಸಾಲಿನ ಕಂದಾಯ ಪಾವತಿಸಿದ ರಶೀದಿ

vii) ಈ ಹಿಂದೆ ಮಂಜೂರಾದ ಕಟ್ಟಡ ನಕ್ಷೆ ಬಗ್ಗೆ ದಾಖಲೆ / ಮಾಹಿತಿ

viii) ತಳಪಾಯದ ಭದ್ರತೆ ಬಗ್ಗೆ ಪ್ರಮಾಣಪತ್ರ (ಹಳೆ ಕಟ್ಟಡಗಳಿಗೆ ಹೆಚ್ಚುವರಿಯಾಗಿ ಕಟ್ಟಡ ನಿರ್ಮಿಸಲು ಪ್ರಸ್ತಾಪಿಸಿದಲ್ಲಿ)

ix) ಕಟ್ಟಡ ನಿರ್ಮಾಣ ನಕ್ಷೆಗಳು ಮತ್ತು ದೃಢೀಕೃತ ಅಂದಾಜು ಪಟ್ಟಿ

**ಬಹು ಅಂತಸ್ತಿನ ಕಟ್ಟಡಗಳು : 15.00 ಮೀ. ಹಾಗೂ ಅದಕ್ಕೂ ಹೆಚ್ಚಿನ ಎತ್ತರದ ಕಟ್ಟಡಗಳಿಗೆ**

**ವಿವಿಧ ಇಲಾಖೆಗಳಿಂದ ಪಡೆದ ನಿರಾಕ್ಷೇಪಣಾ ಪತ್ರಗಳು ;**

i) ಕರ್ನಾಟಕ ಅಗ್ನಿಶಾಮಕ ಇಲಾಖೆ

ii) ಭಾರತೀಯ ವೈಮಾನಿಕ ಪ್ರಾಧಿಕಾರ

iii) ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ಮತ್ತು ನಿಯಂತ್ರಣಾ ಮಂಡಳಿ

iv) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

v) SEIAA

vi) ಬೆಸ್ಕಾಂ

vii) ಬಿ.ಎಸ್.ಎನ್.ಎಲ್.

viii) BMRCL (ನಿರಾಕ್ಷೇಪಣಾ ಪತ್ರ ಅನ್ವಯಿಸಿದಲ್ಲಿ)

**3. ನಕ್ಷೆ ಮಂಜೂರಾತಿಗೆ ಆನ್‌ಲೈನ್ ಕ್ರಮದಲ್ಲಿ ಸಲ್ಲಿಸುವುದು ಕಡ್ಡಾಯವೇ?**

ಹೌದು, ಎಲ್ಲಾ ನಕ್ಷೆ ಮಂಜೂರಾತಿಗಳಿಗೆ ಆನ್‌ಲೈನ್ ಕ್ರಮದಲ್ಲಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ. ಆದರೆ, ಉಪವಿಭಾಗಗಳ ವ್ಯಾಪ್ತಿಯಲ್ಲಿ ಮಂಜೂರು ಮಾಡುವ ಏಕಗೃಹ ವಸತಿ ಕಟ್ಟಡಗಳು ಮತ್ತು ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದಿಂದ ಅಭಿವೃದ್ಧಿ ಯೋಜನಾ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಾಣಕ್ಕೆ ಮಂಜೂರಾತಿ ಕೋರಿ ಪ್ರಕರಣಗಳಲ್ಲಿ ಆನ್‌ಲೈನ್ ನಲ್ಲಿ ಅರ್ಜಿ ನೊಂದಾಯಿಸಿಕೊಂಡು, ಮ್ಯಾನ್ಯುಯಲ್ ಪದ್ಧತಿಯಲ್ಲಿ ನಕ್ಷೆ ಮಂಜೂರಾತಿ ನೀಡಲಾಗುತ್ತಿದೆ.

**4. ಕಟ್ಟಡ ನಕ್ಷೆ ಮಂಜೂರಾತಿಗಳನ್ನು ಅರ್ಜಿ ಸಲ್ಲಿಸಿದ ಎಷ್ಟು ದಿನಗಳೊಳಗೆ ನೀಡಲಾಗುತ್ತಿದೆ.**

ಏಕ ಗೃಹ ವಸತಿ ಕಟ್ಟಡಗಳು ಮತ್ತು ಸುವರ್ಣ ಪರವಾನಗಿ ಅಡಿ ಮಂಜೂರಾತಿ ನೀಡಲಾಗುವ ನಕ್ಷೆಗಳನ್ನು ಅರ್ಜಿ ಸಲ್ಲಿಸಿದ ಮೂರು (3) ಕಾರ್ಯ ನಿರತ ದಿನಗಳೊಳಗೆ ನೀಡಲಾಗುತ್ತಿದೆ. ಉಳಿದಂತಹ ಪ್ರಕರಣಗಳನ್ನು 90 ದಿನಗಳ ಕಾಲಾವಧಿಯಲ್ಲಿ ನೀಡಲಾಗುತ್ತದೆ.

5. ನಕ್ಷೆ ಮಂಜೂರಾತಿಗೆ ನಿಗಧಿಪಡಿಸಲಾದ ಶುಲ್ಕಗಳ ವಿವರಗಳೇನು?

**RATES FOR PLAN SANCTION / CC**

| Sl. No | Description | Circular No. & date | LICENCE FEES | | | COPIES | | Compound wall Fee (for Running mtr) |
|---|---|---|---|---|---|---|---|---|
| | | | Resi. | Comm. | Indl. | Copies (1 to 5) for each copy | Copies (6 & above) for each copy | |
| 1 | 2 | 3 | 4 | 5 | 6 | 7 | 8 | 9 |
| 1 | **Upto 4 units** | **As per Commissioner circular No. JDTP / C2/PR/54/ 07-08 dt: 26-02-2008** | | | | | | |
| | a) 100sqm site area | | 6.00 | - | - | 100.00 | 200.00 | 10.00 |
| | b) 101 to 250 sqm site area | | 12.00 | - | - | | | |
| | c) 251 to 500 sqm site area | | 20.00 | - | - | | | |
| | d) 501 sqm and above | | 30.00 | - | - | **Circular dt: 18-12-2007** | | |
| | | | | | | | | |
| 2 | **5 units & above** | | | | | | | |
| | a) Upto 4000 sqm sital area | | 60.00 | - | - | 400.00 | 600.00 | 10.00 |
| | b) Above 4000 sqm sital area | | 80.00 | - | - | | | |
| | | | | | | **Circular dt: 18-12-2007** | | |
| 3 | **Industrial buildings** | | | | 75.00 | | | |
| | | | | | | | | |
| 4 | **Non-residential** | | | | | | | |
| | a) Upto 2000 sqm sital area | | - | 60.00 | - | 400.00 | 600.00 | 10.00 |
| | b) 2001 to 4000 sqm sital area | | - | 80.00 | - | | | |
| | c) Above 4000 sqm sital area | | - | 100.00 | - | | | |
| | d) High density development (Star Hotel, Multiplex, Shopping Mall, Commercial Complex & IT, BT) | | - | 125.00 | - | **Circular dt: 18-12-2007** | | |
| | | | | | | | | |
| 5 | **Ground Rent Charges** | | **Circular dt: 18-12-2007** | | | | | |
| | Apartments | | 40.00 | | | | | |
| | a) 0 to 100 sqm | | | 30.00 | - | - | - | - |
| | b) 101 to 250 sqm | | | 50.00 | - | - | - | - |
| | c) 251 to 500 sqm | | | 80.00 | - | - | - | - |
| | d) Above 501 sqm | | | 100.00 | - | - | - | - |
| | | | | | | | | |
| 6 | **Betterment Charges** | | **As per KTCP Act 1961** | | | | | |
| | a) For **Site** | | 20.00 | 75.00 | 40.00 | | | |
| | b) For **Building** (for total built up area) | | 2.00 | 10.00 | 4.00 | | | |
| 7 | **Secutiry Deposit** | | 100.00 | 100.00 | | **As per Zoning Regulations** | | |
| | | | | | | | | |

**6. ಅರ್ಜಿಯೊಂದಿಗೆ ಇತರೆ  ಇಲಾಖೆಗಳಿಂದ ಪಡೆದ ನಿರಾಕ್ಷೇಪಣಾ ಪತ್ರಗಳನ್ನು ಲಗತ್ತಿಸಬೇಕೆ?**

ಹೌದು, ಕಟ್ಟಡವು 15.00 ಮೀ. ಗಿಂತ ಹೆಚ್ಚು ಎತ್ತರವಾಗಿದ್ದಲ್ಲಿ (Highrise) ಕರ್ನಾಟಕ ಅಗ್ನಿಶಾಮಕ ಇಲಾಖೆ ಮತ್ತು SEIAA ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಬೇಕಾಗಿರುತ್ತದೆ. ಉಳಿದ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಕಟ್ಟಡ ನಿರ್ಮಾಣ ಪ್ರಾರಂಭಿಸಿ, ಪ್ರಾರಂಭಿಕ ಪ್ರಮಾಣಪತ್ರ ಪಡೆಯುವ ಹಂತದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ.

**7. ಕಟ್ಟಡ ನಿರ್ಮಾಣಕ್ಕೆ ಅರ್ಜಿಯೊಂದಿಗೆ ಸಲ್ಲಿಸಬೇಕಾದ ಅರ್ಜಿಯ ಪ್ರಮಾಣಪತ್ರಗಳ ನಮೂನೆಗಳು ಎಲ್ಲಿ ಸಿಗುತ್ತವೆ?**

ನಿಗಧಿತ ಅರ್ಜಿ ನಮೂನೆ ಮತ್ತು ಇತರೇ ನಿಗಧಿಪಡಿಸಿದ ನಮೂನೆಗಳು ಪಾಲಿಕೆಯ ವೆಬ್‌ಸೈಟ್ bbmp.gov.in ನಲ್ಲಿ Downloadable Forms  ಶೀರ್ಷಿಕೆ ಅಡಿ ಲಭ್ಯವಿದ್ದು, Download ಮಾಡಿಕೊಳ್ಳಬಹುದಾಗಿದೆ.

**8. ಅರ್ಜಿಯ ಜೊತೆಗೆ ಶುಲ್ಕಗಳನ್ನು ನೀಡಬೇಕೆ?**

ಪರವಾನಗಿ ಶುಲ್ಕದ ಶೇ. 5 ರಷ್ಟನ್ನು ಪರಿಶೀಲನಾ ಶುಲ್ಕವಾಗಿ ಅರ್ಜಿಯೊಂದಿಗೆ ಪಾವತಿಸಬೇಕಾಗಿರುತ್ತದೆ. ಉಳಿದ ಶುಲ್ಕಗಳನ್ನು ನಕ್ಷೆ ಮಂಜೂರಾತಿಗೆ ಪರಿಗಣಿಸಿದ ನಂತರ ನೀಡುವ ಶುಲ್ಕ ಪಾವತಿ ತಿಳುವಳಿಕೆ ಅನುಸಾರ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾಲಿಕೆಗೆ ಸಂದಾಯ ಮಾಡಬೇಕಾಗಿರುತ್ತದೆ.

**9. ನಕ್ಷೆ ಮಂಜೂರಾತಿಗೆ ಸಲ್ಲಿಸಿದ ಅರ್ಜಿಯು ಯಾವ ಹಂತದಲ್ಲಿ ಎಂದು ನನಗೆ ಹೇಗೆ ತಿಳಿಯುತ್ತದೆ.**

ನಕ್ಷೆ ಮಂಜೂರಾತಿಯನ್ನು ಆನ್‌ಲೈನ್ ಕ್ರಮದಲ್ಲಿ ನಿರ್ವಹಿಸುತ್ತಿರುವುದರಿಂದ ನಕ್ಷೆ ಪರಿಶೀಲನೆ ಮತ್ತು ಕಡತದ ಚಲನವಲನಗಳನ್ನು ತಮ್ಮ ನಕ್ಷೆಯನ್ನು ಆನ್‌ಲೈನ್ ಮೂಲಕ ಮಂಜೂರಾತಿಗೆ ಪಾಲಿಕೆಗೆ ಸಲ್ಲಿಸಿರುವ ಆರ್ಕಿಟೆಕ್ಟ್ / ಇಂಜಿನಿಯರ್‌ರವರ ಡೆಸ್ಕ್ ಗೆ ತನ್ನಿಂತಾನೆ ಸ್ವಯಂಚಾಲಿತವಾಗಿ Update ಆಗುತ್ತದೆ.

ಇದಲ್ಲದೇ, ಅರ್ಜಿ ತಿರಸ್ಕೃತಗೊಂಡಿದ್ದಲ್ಲಿ, ಅರ್ಜಿ ಸಲ್ಲಿಸಿದ್ದ ದಿನಾಂಕದಿಂದ 30 ದಿನಗಳೊಳಗೆ ಹಿಂಬರಹ ಪತ್ರವನ್ನು ರವಾನಿಸಲಾಗುತ್ತದೆ.

**10. ನಕ್ಷೆ ಮಂಜೂರಾತಿ ನೀಡಲು ವಿಳಂಬವಾಗಲು ಕಾರಣಗಳೇನು?**

ನಕ್ಷೆ ಮಂಜೂರಾತಿಗೆ ಮೇಲಿನ ಪ್ರಶ್ನೆಗಳಲ್ಲಿ ತಿಳಿಸಿರುವಂತೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸದೇ ಇದ್ದಲ್ಲಿ ಹಾಗೂ ನಿಗಧಿತ ಶುಲ್ಕಗಳನ್ನು ಪಾವತಿಸದೇ ಇದ್ದಲ್ಲಿ ಅಂತಹ ಪ್ರಕರಣಗಳಲ್ಲಿ ನಕ್ಷೆ ಮಂಜೂರಾತಿ ನೀಡುವುದು ವಿಳಂಬವಾಗುತ್ತದೆ.

**11. ವಲಯ ಕಛೇರಿ ಹಂತದಲ್ಲಿ ನಕ್ಷೆ ಮಂಜೂರಾತಿಗೆ ಸಲ್ಲಿಸಬೇಕಾದ ಕಛೇರಿಗಳ ವಿಳಾಸವೇನು?**

| ಕ್ರಮ ಸಂಖ್ಯೆ | **ವಲಯ** | **ಕಛೇರಿ ವಿಳಾಸ** |
|---|---|---|
| 1 | **2** | **3** |
| 1 | ಪೂರ್ವ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಮೇಯೋಹಾಲ್, ಯುಟಿಲಿಟಿ ಬಿಲ್ಡಿಂಗ್, 22ನೇ ಮಹಡಿ, ಎಂ.ಜಿ.ರಸ್ತೆ, ಬೆಂಗಳೂರು. |
| 2 | ಪಶ್ಚಿಮ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸಂಪಿಗೆ ರಸ್ತೆ, ಮಂತ್ರಿ ಮಾಲ್ ಎದುರು, ಶೇಷಾದ್ರಿಪುರಂ, ಬೆಂಗಳೂರು – 560 020 |
| 3 | ದಕ್ಷಿಣ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಕನಕನಪಾಳ್ಯ, ಜಯನಗರ 2 ನೇ ಬ್ಲಾಕ್, ಬೆಂಗಳೂರು. |
| 4 | ಮಹದೇವಪುರ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಫಿನಿಕ್ಸ್ ಮಾಲ್ ಎದುರು, ಬೆಂಗಳೂರು. |
| 5 | ಯಲಹಂಕ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು – 560 092 |
| 6 | ದಾಸರಹಳ್ಳಿ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಹೆಸರಘಟ್ಟ ಮುಖ್ಯರಸ್ತೆ, ಬಾಗಲಗುಂಟೆ, ಬೆಂಗಳೂರು – 560 057 |
| 7 | ಬೊಮ್ಮನಹಳ್ಳಿ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಹಳೇ ಸಿ.ಎಂ.ಸಿ. ಬಿಲ್ಡಿಂಗ್, ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು. |
| 8 | ರಾಜರಾಜೇಶ್ವರಿನಗರ ವಲಯ | ಸಹಾಯಕ ನಿರ್ದೇಶಕರು (ನಗರ ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಐಡಿಯಲ್ ಹೋಮ್ಸ್, ರಾಜರಾಜೇಶ್ವರಿನಗರ, ಬೆಂಗಳೂರು – 560 098. |

**12. ಬಹುಮಹಡಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡಲು ಅರ್ಜಿ ಸಲ್ಲಿಸಬೇಕಾದ ಕಛೇರಿಗಳ ವಿಳಾಸವೇನು**

| ಕ್ರಮ ಸಂಖ್ಯೆ | ಕಛೇರಿ | ವ್ಯಾಪ್ತಿಗೊಳಪಡುವ ವಲಯಗಳು | ಕಛೇರಿ ವಿಳಾಸ |
|---|---|---|---|
| 1 | 2 | 3 | 4 |
| 1 | ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) | ಪೂರ್ವ ವಲಯ, ಮಹದೇವಪುರ ವಲಯ, ಯಲಹಂಕ ವಲಯ ಮತ್ತು ದಾಸರಹಳ್ಳಿ ವಲಯ | ಬಿಬಿಎಂಪಿ ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಅನೆಕ್ಸ್ ಬಿಲ್ಡಿಂಗ್, ಮೊದಲನೇ ಮಹಡಿ, ಬೆಂಗಳೂರು – 560 002 |
| 2 | ಜಂಟಿ ನಿರ್ದೇಶಕರು (ನಗರ ಯೋಜನೆ – ದಕ್ಷಿಣ) | ದಕ್ಷಿಣ ವಲಯ, ಪಶ್ಚಿಮ ವಲಯ, ಬೊಮ್ಮನಹಳ್ಳಿ ವಲಯ ಮತ್ತು ರಾಜರಾಜೇಶ್ವರಿನಗರ ವಲಯ | ಬಿಬಿಎಂಪಿ ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಅನೆಕ್ಸ್ – 3 ಬಿಲ್ಡಿಂಗ್, ನಾಲ್ಕನೇ ಮಹಡಿ, ಬೆಂಗಳೂರು – 560 002 |

**13. ಅನಧಿಕೃತ ಕಟ್ಟಡಗಳೆಂದು ಯಾವ ಯಾವ ಕಟ್ಟಡಗಳನ್ನು ಗುರುತಿಸಲಾಗುತ್ತದೆ.**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರನ್ವಯ ಬೆಂಗಳೂರು ನಗರಕ್ಕೆ ಪ್ರಥಮವಾಗಿ ಸ್ಥೂಲಾಭಿವೃದ್ಧಿ ಯೋಜನೆಯನ್ನು ಮಂಜೂರು ಮಾಡಲಾದ ದಿನಾಂಕ: 22–05–1972 ರ ನಂತರ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆಯದ ಕಟ್ಟಡಗಳನ್ನು ಅನಧಿಕೃತ ಕಟ್ಟಡಗಳೆಂದು ಗುರುತಿಸಲಾಗುತ್ತದೆ.

**14. ಅನಧಿಕೃತ ಕಟ್ಟಡ ತೆರವುಗೊಳಿಸುವ ಅಧಿಕಾರವು ಯಾರ ವ್ಯಾಪ್ತಿಗೊಳಪಡುತ್ತದೆ?**

ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವುದು ಪಾಲಿಕೆಯ ಸಂಬಂಧಪಟ್ಟ ಉಪ–ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಕಾರ್ಯ ವ್ಯಾಪ್ತಿಗೊಳಪಡುತ್ತದೆ.

**15. ಮಂಜೂರಾದ ನಕ್ಷೆಗೆ ವ್ಯತಿರಿಕ್ತವಾಗಿ / ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಇರುವ ಕ್ರಮಗಳೇನು?**

ಅನಧಿಕೃತ / ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸುವ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳಲು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ರ ಕಲಂ 67 ರಡಿಯಲ್ಲಿ ಪಾಲಿಕೆಯ ಆಯುಕ್ತರು ರವರಿಂದ ಸಂಬಂಧಪಟ್ಟ ಉಪ–ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರವರುಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಾಣ ಅಥವಾ ಅನಧಿಕೃತ ನಿರ್ಮಾಣ ಕಂಡು ಬಂದಲ್ಲಿ ಕೆ.ಎಂ.ಸಿ. ಕಾಯ್ದೆ 1976 ರ ಸೆಕ್ಷನ್ 321(1) ರಂತೆ ನೋಟಿಸ್ ನೀಡುವುದು, 321(2) ರಂತೆ ತಾತ್ಕಾಲಿಕ ಆದೇಶ ಮತ್ತು ಸಮಜಾಯಿಷಿ ನಂತರ ಅಗತ್ಯವಿದ್ದಲ್ಲಿ ಸೆಕ್ಷನ್ 321(3) ರಂತೆ ಸ್ಥಿರೀಕರಣ ಆದೇಶ ಹೊರಡಿಸಿ ಕ್ರಮ ಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಅಭಿಯಂತರರು ಅಧಿಕಾರ ಹೊಂದಿರುತ್ತಾರೆ. ತದನಂತರ, ಸೆಕ್ಷನ್ 462 ರಂತೆ ವ್ಯತಿರಿಕ್ತ ನಿರ್ಮಾಣ ಅಥವಾ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಆದೇಶ ಹೊರಡಿಸಿ, ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.